ಜೊತೆಗೂ ಮಾತಾಡುವ ಆಕೆ ಶಿವಶಂಕರ್ ಸರ್ ಜೊತೆಗೂ ಅದೇ ರೀತಿ ಮಾತಾಡಿರಬಹುದಲ್ವಾ? ಆಡಿದ ಮಾತೆಲ್ಲಾ ಪ್ರೀತಿಯಾಗುತ್ತಾ? ಹಾಗಾಗುವುದಿದ್ದರೆ ಲೋಕದಲ್ಲಿ ಎಷ್ಟು ಪ್ರೀತಿಯ ಪರ್ವತವೇ ಹುಟ್ಟಬೇಕಿತ್ತು. ಇಲ್ಲ ಪ್ರತೀಶಾ ಸುಮ್ಮನೆ ಹಾಗೆ ನಗುನಗುತ್ತ ಮಾತಾಡಿರಬಹುದು, ನಾನೇ ಅದನ್ನು ನನ್ನೊಳಗೆ ಕುಂಬಳಕಾಯಿ ಮಾಡಿಬಿಟ್ಟೆ. ಆ ಮೇಲೆ ನನ್ನೊಳಗೆ ಅವಳು ದ್ವೇಷದ ಕಿಡಿಯಾಗಿಯೇ ಮುಂದುವರಿದಳು. ಆದರೆ, ಅವಳೊಳಗೆ ನನ್ನ ಬಗ್ಗೆ ಯಾವ ಭಾವವಿತ್ತು? ನನ್ನನ್ನು ಒಳಗೊಳಗೆ ದ್ವೇಷಿಸುತ್ತಿದ್ದಳಾ? ಪ್ರೀತಿಸುತ್ತಿದ್ದಳಾ? ರಂಜಿನಿ ಪ್ರಶ್ನೆಗಳಲ್ಲೇ ಮಿಂದೆದ್ದುಹೋದಳು. ಒಬ್ಬರ ಸಾವಿನಲ್ಲಿ ನಾವು ನೂರಾರು ಪ್ರಶ್ನೆಗಳನ್ನು ಹುಡುಕುತ್ತ ಸಾಗುತ್ತೇವೆ... ಹಾಗೆ ಹುಡುಕಾಡಿದಳು ರಂಜಿನಿ. ತನ್ನೊಳಗೆ ದ್ವೇಷವಾಗಿಯೇ ಬೆಳೆದ ಪ್ರತೀಶಾಳ ಮುಖ ಮತ್ತೆ ಕಣ್ಣೆದುರು ತಂದುಕೊಂಡಳು . ಅದೇ ಕಣ್ಣಲ್ಲಿ ಹನಿಗಳು ಸಣ್ಣಗೇ ಜಿನುಗತೊಡಗಿತು. ‘ಯಾರನ್ನೋ ತುಂಬಾ ಹಚ್ಚಿಕೊಂಡಿದ್ಲಂತೆ, ಆದರೆ ಅವರು ಇವಳ ಪ್ರೀತಿ ನಿರಾಕರಿಸಿದ್ರಂತೆ’ ಅಂತ ಸುಮಲತಾ ಹೇಳಿದ್ದನ್ನ ಮತ್ತೆ ಯೋಚಿಸತೊಡಗಿದಳು. ಅಷ್ಟೊಂದು ಹಚ್ಚಿಕೊಳ್ಳುವ ಗುಣ ಅವಳಲ್ಲಿತ್ತಾ? ಯಾರಿಂದ ನಿರಾಕರಣೆಗೊಳಗಾದರೂ ಧೈರ್ಯವಾಗಿ ಮುನ್ನುಗ್ಗುವ ಗುಣ ಇತ್ತಲ್ವಾ ಅವಳಲ್ಲಿ, ಅಥವಾ ಆ ನಿರಾಕರಿಸಿದ ಜೀವ ಅಷ್ಟೊಂದು ಮುಖ್ಯವಾಗಿತ್ತಾ ಅವಳಿಗೆ, ಯಾರಿರಬಹುದು ಆ ವ್ಯಕ್ತಿ ಎಂದು ಸುಮ್ಮನೆ ಯೋಚಿಸುತ್ತಾ ಹೋದವಳು ‘ಶಿವಶಂಕರ್ ಸರ್’ ಎಂದು ತನ್ನೊಳಗೆ ಒಮ್ಮೆ ಕೇಳಿಕೊಂಡು ಬೆಚ್ಚಿದಳು.

ಅವರೇ ಇರಬಹುದಾ? ಎನ್ನುವ ಭಯಭರಿತ ಪ್ರಶ್ನೆಯೊಂದು ಎದೆಯೊಳಗೆ ಬೆಟ್ಟದಂತೆ ನಿಂತುಬಿಟ್ಟಿತು. ಆ ಪ್ರಶ್ನೆ ಹುಟ್ಟಿದ್ದಕ್ಕೆ ನಿಂತಲ್ಲೇ ನಡುಗಿಹೋದಳು. ತನ್ನೊಳಗಿನ ಯಾವುದೋ ಜಗತ್ತೊಂದು ಧುತ್ತನೇ ಕುಸಿದು ಬಿದ್ದಂತಾಯ್ತು. ಜಗಲಿಯಲ್ಲಿ ಶಿವಶಂಕರ್ ಸರ್ ಇನ್ನೂ ಮಾತಾಡುತ್ತ ನಿಂತಿದ್ದಾರಾ ನೋಡಿದಳು, ಪ್ರಿನ್ಸಿಪಾಲ್ ಕೆಮೆಸ್ಟ್ರಿ ಸರ್ ಜೊತೆ ನಿಂತು ಆತ್ಮಹತ್ಯೆ ಪ್ರಕರಣದ ಕುರಿತು ಏನನ್ನೋ ಚರ್ಚೆ ಮಾಡುತ್ತಿರುವಂತೆ ಕಾಣಿಸಿತು. ಅಲ್ಲೆಲ್ಲಿಯೂ ಅವಳಿಗೆ ಶಿವಶಂಕರ್ ಸರ್ ಕಾಣಿಸಲಿಲ್ಲ. ಕೆಲವೇ ಕ್ಷಣದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಎಲ್ಲರೂ ಸೇರುವಂತೆ ಮೈಕ್ ಮೂಲಕ ಸಾರಲಾಯಿತು. ‘ಪ್ರತೀಶಾ ಎನ್ನುವ ವಿದ್ಯಾರ್ಥಿನಿ ವೈಯಕ್ತಿಕ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಕ್ರಿಯಾಶೀಲವಾಗಿದ್ದ ಈ ಧೈರ್ಯವಂತೆ ಹುಡುಗಿ ಹೀಗ್ಯಾಕೆ ಮಾಡಿಕೊಂಡ್ಲು ನಮಗ್ಯಾರಿಗೂ ಗೊತ್ತಾಗುತ್ತಿಲ್ಲ, ದಯವಿಟ್ಟು ನೀವು ಬದುಕಿನಲ್ಲಿ ಈ ರೀತಿ ನಿರ್ಧಾರ ತಗೆದುಕೊಳ್ಬೇಡಿ. ಮೃತ ವಿದ್ಯಾರ್ಥಿನಿಯ ಆತ್ಮಕ್ಕೆ ಶಾಂತಿ ಸಿಗಲಿ, ಈ ದಿನ ಯಾವುದೇ ತರಗತಿ ಇರುವುದಿಲ್ಲ’ ಎಂದೆಲ್ಲಾ ಕಾಲೇಜು ಮುಖ್ಯಸ್ಥರು ಸಾರಿದರು. ಕೆಲ ಉಪನ್ಯಾಸಕರು ಪ್ರತೀಶಾಳ ಅಂತಿಮ ದರ್ಶನಕ್ಕಾಗಿ ಅವಳ ಮನೆಯತ್ತ ತೆರಳಿದರು. ಆದರೆ, ಎಲ್ಲಿಯೂ ರಂಜಿನಿಗೆ ಶಿವಶಂಕರ್ ಸರ್ ಕಾಣಿಸಲಿಲ್ಲ. ಮತ್ತೆ ಒಳಗೊಳಗೆ ಕಂಪಿಸಿದಳು. ಗುರಿ, ನಗು, ತುಂಟಾಟ, ಮಹತ್ವಾಕಾಂಕ್ಷೆ, ಹುಮ್ಮಸ್ಸು, ಹುಂಬ ಧೈರ್ಯ, ಪುಟ್ಟ ಅಹಂ, ತನ್ನ ನೋಡಿ ಹಾಯ್ ಎನ್ನುತ್ತಿದ್ದ ಅವಳ ಕೈಗಳು, ಕುಡಿನೋಟ, ಎಲ್ಲವನ್ನೂ ಕಳೆದುಕೊಂಡು ತಣ್ಣಗೇ ಮಲಗಿಬಿಟ್ಟ ಪ್ರತೀಶಾಳನ್ನು ಅವಳ ಸಾವಿನಲ್ಲೂ ಎದುರಿಸುವ ಧೈರ್ಯ ರಂಜಿನಿಗೆ ಬರಲಿಲ್ಲ. ಒಂದು ವಿಚಿತ್ರ ಮೌನದ ಕೂಪದಲ್ಲಿ ಬಿದ್ದುಬಿಟ್ಟಂತಹ ಭಾಸವಾಯಿತು. ಎಲ್ಲವನ್ನೂ ಕಳಚಿಕೊಂಡ ಬೋಳುಮರದಂತಾಗಿದ್ದೇನೆ ಅನ್ನಿಸಿ ಬಿಕ್ಕಿದಳು. ನಿಂತರೆ ಅಲ್ಲೇ ಕುಸಿದು ಬಿದ್ದುಬಿಡುತ್ತೇನೆ... ನನ್ನೊಳಗಿನ ಭಾವವನ್ನೆಲ್ಲ ಅಪ್ರಜ್ಞಾವಸ್ಥೆಯಲ್ಲಿ ಸಾರಿಬಿಡುತ್ತೇನೆ ಎನ್ನುವ ಭಯವಾಗಿ ಒಂದು ಕ್ಷಣವೂ ಅಲ್ಲಿ ನಿಲ್ಲಲಾಗದೇ ಮನೆ ಕಡೆ ನಡೆದುಬಿಟ್ಟಳು.

ಅವಳ ಆಕಾಶ ನೀಲಿ ಬಣ್ಣದ ಕುರ್ತಾ ಹುರುಪು ಕಳೆದುಕೊಂಡು ಮೋಡಗಟ್ಟಿ ಕಪ್ಪಗಾದ ಬಾನಿನಂತೆ ಕಾಣುತ್ತಿತ್ತು. ಒಂದು ಕಣ್ಣಲ್ಲಿ ಶಿವಶಂಕರ್ ಸರ್, ಮತ್ತೊಂದು ಕಣ್ಣಲ್ಲಿ ಪ್ರತೀಶಾ ಇವಳನ್ನೇ ನೋಡಿ ದುರುಗುಟ್ಟಿದಂತಾಯಿತು, ನಕ್ಕಂತಾಯಿತು. ಸಿಟ್ಟಿನಿಂದ ನೋಡಿ ಇರಿದಂತಾಯಿತು. ಅಂತಹ ಅನ್ನಿಸುವಿಕೆಯನ್ನೂ ಕೂಡ ಎದುರಿಸಲಾಗದೇ ಜ್ವರ ಬಂದಂತಾಗಿ ಬೆವರಿಹೋದಳು. ದಾರಿಯ ಯಾವುದೋ ಮರದಲ್ಲಿ ಕೂತ ಮೈನಾ ಹಕ್ಕಿ ತನ್ನೊಳಗಿನ ಖಾಲಿತನ, ವಿಷಾದ, ಮೌನ, ಎಲ್ಲವನ್ನು ಒಳಗೊಂಡು ಶಿವರಂಜಿನಿ ರಾಗವನ್ನು ಮಡುಗಟ್ಟಿ ಹಾಡಿದಂತೆ ಅನ್ನಿಸಿ ರಂಜಿನಿ ಬಿಕ್ಕಿದಳು. ●